ದಿನಾಂಕಃ **06.01.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

<u>ಪಾಟೀ ಸವಾಲುಃ ಶ್ರೀ ಎನ್ ಎಸ್ ವಕೀಲರಿಂದಃ-</u>

ನಾನು 32 ವರ್ಷಗಳಿಂದ ಪತ್ರ ಬರಹಗಾರನಾಗಿ ಕರ್ತವ್ಯ ನಿರ್ಹಿಸುತ್ತಿದ್ದೇನೆ. ಸಾಮಾನ್ಯವಾಗಿ ಕ್ರಯ ಪತ್ರ ಆದ ನಂತರ ಸ್ವಾಧೀನ ವಹಿಸಿಕೊಡುತ್ತಾರೋ ಅಥವಾ ಕ್ರಯ ಪತ್ರದ ಮೊದಲೇ ಸ್ವಾಧೀನ ವಹಿಸಿಕೊಡುತ್ತಾರೋ ಎಂದರೆ ಸಾಕ್ಷಿ ಕ್ರಯ ಪತ್ರದ ದಿನವೇ ಸ್ವಾಧೀನ ವಹಿಸಿಕೊಡುತ್ತಾರೆ ಎಂದು ನುಡಿಯುತ್ತಾರೆ. ಕ್ರಯಪತ್ರದಲ್ಲಿ ಸ್ವಾಧೀನ ಈಗಾಗಲೇ ಹಸ್ತಾಂತರ ಮಾಡಿರುತ್ತಾರೆ ಎಂದು ನಮೂದಿಸಿರುತ್ತದೆಯೋ ಅಥವಾ ಸ್ವಾಧೀನವನ್ನು ಹಸ್ತಾಂತರ ಮಾಡುತ್ತಿದ್ದೇನೆ ಎಂದು ನಮೂದು ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿ ಸ್ವಾಧೀನ ವಹಿಸಿಕೊಡುತ್ತಾರೆ ಎಂದು ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ಕ್ರಯ ಪತ್ರ ಬರೆಯುವ ದಿನಕ್ಕೆ ಸದರಿ ಆಸ್ತಿಯ ಮೇಲೆ ನ್ಯಾಯಾಲಯದಲ್ಲಿ ದಾವೆ ಇರುವ ಬಗ್ಗೆ ಎರಡೂ ಪಕ್ಷಗಾರರು ನನಗೆ ಮಾಹಿತಿ ನೀಡಿರುವುದಿಲ್ಲ. ಕ್ರಯಪತ್ರ ಬರೆಸಿಕೊಟ್ಟ ಕೃಷ್ಣಮೂರ್ತಿ ರವರು ಆಸ್ತಿಯಲ್ಲಿ ಯಾರು ಸ್ವಾಧೀನ ಇದ್ದಾರೆ ಮತ್ತು ಯಾವ ವಿವಾದ ಇರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ನೀಡಿಲ್ಲ. ನನ್ನ ಸಮಕ್ಷಮ ರೂ. 5,00,900-00 ಹಣ ನೀಡಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಕ್ರಯಪತ್ರ ನೋಂದಣಿಯಾದ ದಿನ ಯಾವುದೇ ಹಣಕಾಸಿನ ವ್ಯವಹಾರ ನನ್ನ ಮುಂದೆ ಆಗಿರುವುದನ್ನು ನಾನು ನೋಡಿರುವುದಿಲ್ಲ. ಕೃಷ್ಣಮೂರ್ತಿ ಮತ್ತು ಮೋಹನ್ ರವರು ಸುಳ್ಳು ಮಾಹಿತಿ ನೀಡಿ ಕ್ರಯಪತ್ರವನ್ನು ನನ್ನ ಮೂಲಕ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಣಕಾಸಿನ ವ್ಯವಹಾರವನ್ನು ನೋಡದೇ ಇದ್ದರೂ ಹಾಗೂ ಸ್ವಾಧೀನದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರಗಳು ಸರಿ ಇರುತ್ತವೆ.

ಕ್ರಯಪತ್ರದಲ್ಲಿ ಬರೆದಿರುವ ಹಣವನ್ನು ಪಡೆದಿರುವ ಬಗ್ಗೆ ಯಾರಾದರೂ ನೋಡಿರುತ್ತಾರಾ ಎಂಬ ಪ್ರಶ್ನೆಗೆ ಸಾಕ್ಷಿ ಕ್ರಯಪತ್ರ ಬರೆದು 15 ವರ್ಷವಾಗಿರುವ ಕಾರಣ ನನಗೆ ಅದು ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಕಳೆದ 15 ವರ್ಷಗಳಲ್ಲಿ ಸುಮಾರು 500-600 ಕ್ರಯಪತ್ರಗಳನ್ನು ತಯಾರಿಸಿರುತ್ತೇನೆ. ನನಗೆ ಅವುಗಳ ಬಗ್ಗೆ ನೆನಪಿಲ್ಲ ಎಂದರೆ ಸರಿಯಲ್ಲ. ನನಗೆ ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬರಲು ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿ ನ್ಯಾಯಾಲಯದಿಂದ ನನಗೆ ಸಮನ್ಸ್ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಮನ್ಸ್‌ನಲ್ಲಿ ಕ್ರಯಪತ್ರದ ಬಗ್ಗೆ ನಮೂದು ಇರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಬರೆದಿರುವ ಕ್ರಯ ಪತ್ರದ ಸಂಖ್ಯೆಯನ್ನು ಪ್ರತಿವಾದಿಯ ವಕೀಲರು ಬರೆಯಿಸಿರುತ್ತಾರೆ. ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪ್ರತಿವಾದಿಗಳು ನನ್ನನ್ನು ಕರೆದುಕೊಂಡು ಬಂದು ಸುಳ್ಳು

ಹೇಳಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಕೃಷ್ಣಮೂರ್ತಿ ಮತ್ತು ಮೋಹನ್ ರವರು ಸೃಷ್ಟಿಸಿರುವ ಕ್ರಯಪತ್ರಕ್ಕೆ ಬಿಕ್ಕಲಂದಾರನಾಗಿ ಸಹಿ ಮಾಡಿರುವುದನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.